ಅ) ಮಂಜೂರಾತಿ ನೀಡಿದಾಗ್ಯೂ ಕಾಮಗಾರಿ ವಿಳಂಬಕ್ಕೆ ಕಾರಣವೇನು,

ಇ) ಹಾಗಿದ್ದಲ್ಲಿ, ಶೀಘ್ರವಾಗಿ ಕಾಮಗಾರಿ ನಿರ್ದಿಷ್ಟವಾಗಿ ಕೈಗೆತ್ತಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆಯೇ, ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸ್‌ನಲ್ಲಿ ಒಂದು 33:11 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣದ ಪ್ರಸ್ತಾವನೆಗೆ ಮಂಡಳಿಯ ತಾಂತ್ರಿಕ ಸಮಿತಿಯು ಡಿಸೆಂಬರ್ 95 ರಲ್ಲಿ ಅನುಮೋದನೆ ನೀಡಿದೆ. ಆಡಳಿತಾತ್ಮಕ ಮಂಜೂರಾತಿಯನ್ನು ಇದುವರೆಗೆ ನೀಡಿರುವುದಿಲ್ಲ. ಈ ಕಾರ್ಯಕ್ಕೆ ತಗಲುವ ವೆಚ್ಚ ಸುಮಾರು 101.5 ಲಕ್ಷ ರೂ.ಗಳು

ಆ) ಆಡಳಿತಾತ್ಮಕ ಮಂಜೂರಾತಿಯನ್ನು ಇದುವರೆಗೆ ನೀಡಿಲ್ಲವಾದ್ದರಿಂದ ಕಾಮಗಾರಿಯನ್ನು ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಕಾರ್ಯವನ್ನು 9ನೇ ಯೋಜನೆಯ ಕಾರ್ಯ ಕ್ರಮಗಳಡಿಯಲ್ಲಿ ಸೇರಿಸಲಾಗಿದೆ. 1998-99ರ ಆಯವ್ಯಯದಲ್ಲಿ ಈ ಕಾರ್ಯವನ್ನು ಸೇರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆದರೆ ಇದು ಮಂಡಳಿಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಅವಲಂಭಿಸಿದೆ.

ಶಿವಮೊಗ್ಗ ನಗರಕ್ಕೆ ಹೆಚ್ಚುವರಿ ಪೋಲೀಸ್ ಠಾಣೆ

286 (211) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿವಮೊಗ್ಗ ನಗರದ ಪ್ರಾದೇಶಿಕ ಗಾತ್ರ ಮತ್ತು ಜನಸಂಖ್ಯೆ ಹೆಚ್ಚಾಗಿರುವುದರಿಂದ ನಗರದ ರಕ್ಷಣಾ ದೃಷ್ಟಿಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೆಚ್ಚುವರಿ ಪೋಲೀಸ್ ಠಾಣೆ ಯನ್ನು ಪ್ರಾರಂಭಿಸುವ ಕುರಿತು ಕೂಡಲೇ ಸರ್ಕಾರವು ಕ್ರಮ ಕೈಗೊಳ್ಳುವರೆ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು

ಆ) ಶಿವಮೊಗ್ಗ ನಗರದ ಕೆಲವು ಬಡಾವಣೆಗಳನ್ನು ಸೇರಿಸಿಕೊಂಡು ನಗರದಲ್ಲಿ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ಕ್ರಮಕೈಗೊಳ್ಳಲಾಗುವುದು.

ಸ್ವಾತಂತ್ರ ಹೋರಾಟಗಾರರಿಗೆ ಗೌರವ ಧನ ಹೆಚ್ಚಳ

287 (275) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಕಳೆದ ಬಜೆಟ್ ಅಧಿವೇಶನದಲ್ಲಿ ಎಲ್ಲಾ ಸ್ವಾತಂತ್ರ ಹೋರಾಟಗಾರರಿಗೂ ಗೌರವಧನ ಹೆಚ್ಚಿಸುವ ಬಗ್ಗೆ ಪ್ರಸ್ತಾಪ ಮಾಡಿರುವುದು ನಿಜವಲ್ಲವೇ:

2. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ. ಹೆಚ್. ಪಟೀಲ್ (ಮುಖ್ಯ ಮಂತ್ರಿಗಳು) :

1. ಹೌದು

2. ಸರ್ಕಾರವು ಈಗಾಗಲೇ ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನವನ್ನು ದಿನಾಂಕ 15-8-97 ರಿಂದ ಜಾರಿಗೆ ಬರುವಂತೆ ಮಾಸಿಕ ರೂ. 500 ರಿಂದ 750 ರೂ. ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿದೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ನ್ಯಾಯಬೆಲೆ ಅಂಗಡಿಗಳು

288 (553)

ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಒಟ್ಟು ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಈ ತಾಲ್ಲೂಕಿನಲ್ಲಿರುವ ಒಟ್ಟು ಪಡಿತರ ಚೀಟಿಗಳು ಹಾಗೂ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು?

ಇ) ಈ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳಲ್ಲೂ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆಯೇ?

ಈ) ನ್ಯಾಯಬೆಲೆ ಅಂಗಡಿಗಳಿಲಬಂದು ಪಡಿತರ ಪದಾರ್ಥಗಳನ್ನು ವಿತರಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗುತ್ತದೆಯೆ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 28- 12- 1998ರ ಅಂತ್ಯಕ್ಕೆ ಒಟ್ಟು 45 ನ್ಯಾಯಬೆಲೆ ಅಂಗಡಿಗಳಿರುತ್ತವೆ.

ಆ) ದಿನಾಂಕ : 28- 12- 1998 ರ ಅಂತ್ಯಕ್ಕೆ

ಹಸಿರು ಕಾರ್ಡುಗಳು	18939
ಕೇಸರಿ ಕಾರ್ಡುಗಳು	2383
ಒಟ್ಟು	21372

ಕಾರ್ಡುಗಳನ್ನು ಮೊಳಕಾಲ್ಮೂರು ತಾಲ್ಲೂಕಿನಲ್ಲಿ ವಿತರಿಸಲಾಗಿದೆ.

ಇ) ಇಲ್ಲ

ಈ) ವ್ಯವಹಾರಿಕವಾಗಿ ಸಲಹೆಯನ್ನು ಜಾರಿಗೊಳಿಸುವುದು ಕಷ್ಟ.